ದಿನಾಂಕ **:** 28.03.2024 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣವಚನ ಬೋಧಿಸಲಾಯಿತು.

**ಪಾಟೀ ಸವಾಲುಃ ವಾದಿಯ ಪರವಾಗಿ ಶ್ರೀ ವಿ.ಎ. ವಕೀಲರಿಂದ ಃ**

*ವಾದಿಯವರು ಯಾವ ಪರಿಹಾರ ಕೋರಿ ದಾವೆ ಹಾಕಿದ್ದಾರೆಂದು ತಿಳಿದುಕೊಂಡಿದ್ದೇನೆ . ನಮ್ಮ ಜಾಗವನ್ನು ಅವರದು ಎಂದು ದಾವೆ ಹಾಕಿದ್ದಾರೆ . ದಾವಾಆಸ್ತಿಯು ವಾದಿಯವರಿಗೆ ಸೇರಿದ ಆಸ್ತಿ ಎಂದರೆ ಸರಿಯಲ್ಲ . ದಾವಾಆಸ್ತಿಯ ಬಗ್ಗೆ ನಾನು ದಾಖಲಾತಿಗಳನ್ನು ಪರಿಶೀಲನೆ ಮಾಡಿರುವುದಿಲ್ಲ . ದಾವಾಆಸ್ತಿಯ ಚೆಕ್ಕುಬಂದಿ ಪೂಃ ರಸ್ತೆ ಎಂದರೆ ಸರಿ , ಪ ಃ ಚರಂಡಿ ಎಂದರೆ ಗೊತ್ತಿಲ್ಲ , ಉ ಃ ರಾಜೇಶ್ವರಿ ಎಂದರೆ ನನಗೆ ಗೊತ್ತಿಲ್ಲ ಮತ್ತು ದ ಃ ಮಂಜುಳಮ್ಮ ಎಂದರೆ ನನಗೆ ಗೊತ್ತಿಲ್ಲ . ದಕ್ಷಿಣ ಭಾಗದ ಮಂಜಳಮ್ಮನ ಆಸ್ತಿಯನ್ನು ವಾದಿಯವರು ಖರೀದಿ ಮಾಡಿದ್ದಾರೆ ಮತ್ತು ಅದು ದಾವಾಆಸ್ತಿ ಅಲ್ಲ ಬದಲಾಗಿ ಬೇರೆ ಆಸ್ತಿ ಎಂದರೆ ನನಗೆ ಗೊತ್ತಿಲ್ಲ . ದಾವಾಆಸ್ತಿಯು ಬಾಲಾಂಜನೇಯ ಬಡಾವಣೆಯಲ್ಲಿ ಇದೆ ಎಂದರೆ ಸರಿ . ದಾವಾಆಸ್ತಿಯು ಮೂಲತಃ ಯಾಜ್ಞವಲ್ಕ ಸೇವಾ ದತ್ತಿಗೆ ಸೇರಿದ ಆಸ್ತಿ ಎಂದರೆ ನನಗೆ ಗೊತ್ತಿಲ್ಲ. ಸದರಿ ಯಾಜ್ಞವಲ್ಕ ಸೇವಾ ದತ್ತಿಯ ಅಧ್ಯಕ್ಷರು ದಿ.**29.06.2011** ರಂದು ವಾದಿಯವರಿಗೆ ದಾವಾಆಸ್ತಿಗೆ ಸಂಬಂದಸಿಪಟ್ಟಂತೆ ಶುದ್ಧಕ್ರಯಪತ್ರ ಮಾಡಿ ಸ್ವಾ ಧೀನವನ್ನು ಬಿಟ್ಟುಕೊಟ್ಟಿದ್ದಾರೆಂದರೆ ಸರಿಯಲ್ಲ . ಸದರಿ ಯಾಜ್ಞವಲ್ಕ ಸೇವಾ ದತ್ತಿಗೆ ದಿ **.09.05.2001** ರಂದು ದಾನಪತ್ರದ ಮೂಲಕ ಸದರಿ ಆಸ್ತಿ ಬಂದಿತ್ತು ಎಂದರೆ ಸರಿಯಲ್ಲ . ಶ್ರೀ ಶ್ರೀನಿವಾಸಯ್ಯ ಬಿನ್ ಮುನಿವೆಂಕಟಪ್ಪರವರು ಭಾಸ್ಕರಾಚಾರಿ ಬಿನ್ ಸೀತಾರಾಮಪ್ಪನವರ ಪರವಾಗಿ ಮುಕ್ತಾರುನಾಮೆಯನ್ನು ಪಡೆದು ದಾನಪತ್ರ ಮಾಡಿಕೊಟ್ಟಿದ್ದಾರೆಂದರೆ ಸರಿಯಲ್ಲ . ದಾನಪತ್ರವಾದ ನಂತರ ಎಲ್ಲಾ ದಾಖಲಾತಿಗಳು ಯಾಜ್ಞವಲ್ಕ ಸೇವಾ ದತ್ತಿಯವರ ಹೆಸರಿಗೆ ಬರುತ್ತಿದ್ದವು ಎಂದರೆ ಸರಿಯಲ್ಲ . **2001** ರಂದು ದಾನಪತ್ರ ಮಾಡುವ ಕಾಲಕ್ಕೆ ದಾವಾಆಸ್ತಿಯ ದಾಖಲಾತಿಗಳು ಯಾರ ಹೆಸರಿನಲ್ಲಿ ಬರುತ್ತಿದ್ದವು*

ಎಂದು ನಾನು ನೋಡಿರುವುದಿಲ್ಲ. ಯಾಜ್ಞವಲ್ಕ ಸೇವಾ ದತ್ತಿಯವರು ದಾನಪತ್ರವನ್ನು ಪಡೆದ ನಂತರ ಅವರ ಹೆಸರಿಗೆ ಪುರಸಭೆಯವರು ದಾಖಲಾತಿಯನ್ನು ಮಾಡಿಕೊಟ್ಟರು ಎಂದರೆ ಸರಿಯಲ್ಲ . ದಾವಾಆಸ್ತಿಗೆ ಸಂಬಂಧಪಟ್ಟಂತೆ ದಿ **28.03.1964** ರಲ್ಲಿ ಬಣಜಿಗರ ಬೈಯಮ್ಮ ಕೋಂ ನಾರಾಯಣಪ್ಪನವರು ಭಾಸ್ಕರಾಚಾರಿಯವರಿಗೆ ಶುದ್ಧಕ್ರಯಪತ್ರವನ್ನು ಮಾಡಿಕೊಟ್ಟಿದ್ದರು ಎಂದರೆ ಸರಿಯಲ್ಲ . **1964** ರಲ್ಲಿ ನಾನು ಜನಿಸಿರಲಿಲ್ಲ. ಆದ್ದರಿಂದ **1964** ರಲ್ಲಿ ದಾವಾಆಸ್ತಿಗೆ ಸಂಬಂಧಪಟ್ಟಂತೆ ಯಾವ ಯಾವ ವ್ಯವಹಾರಗಳು ಆಗಿವೆ ಎಂದು ನಾನು ತಿಳಿದುಕೊಂಡಿರುವುದಿಲ್ಲ. **1964** ರಲ್ಲಿ ದಾವಾಆಸ್ತಿಯು ಪುರಸಭೆಯ ವ್ಯಾಪ್ತಿಗೆ ಸೇರಿತ್ತು ಎಂದರೆ ಸರಿಯಲ್ಲ. ನನ್ನ ದಾಖಲಾತಿಗಳನ್ನು ನೋಡಿ ಆ ರೀತಿ ಪುರಸಭೆಯ ವ್ಯಾಪ್ತಿಗೆ ಹೋಗಿಲ್ಲ ಎಂದು ಹೇಳುತ್ತಿದ್ದೇನೆ . ನನಗೆ ದಾಖಲಾತಿಗಳು **1972** ರಲ್ಲಿ ಬಂದಿರುತ್ತವೆ. ಆದಕ್ಕಿಂತ ಮೊದಲು ಸದರಿ ದಾಖಲಾತಿಗಳು ಯಾರಿಗೆ ಇದ್ದವು ಎಂದು ನಾನು ತಿಳಿದುಕೊಂಡಿರುವುದಿಲ್ಲ . ದಾವಾಆಸ್ತಿಯು ಪುರಸಭೆಗೆ ಸೇರಿದೆ ಬದಲಾಗಿ ಜೆ .ತಿಮ್ಮಸಂದ್ರ ಪಂಚಾಯಿತಿಗೆ ಸೇರಿಲ್ಲ ಎಂದರೆ ಸರಿಯಲ್ಲ . ಜೆ.ತಿಮ್ಮಸಂದ್ರ ಪಂಚಾಯಿತಿಯಿಂದ ದಾವಾಆಸ್ತಿಯ ವ್ಯಾಪ್ತಿ ಪುರಸಭೆಗೆ ಬಂದ ಬಗ್ಗೆ ದಾಖಲಾತಿ ನೀಡಿದ್ದೇನೆ . ಆ ಬಗ್ಗೆ ನನ್ನ ಕಂದಾಯ ಬಿಲ್ಲನ್ನು ನೀಡಿದ್ದೇನೆ . ಪಂಚಾಯಿತಿಯಿಂದ ಪುರಸಭೆಗೆ ಆದ ದಾಖಲಾತಿ ನೀಡಿದ್ದೇನೆ . ಜೆ.ತಿಮ್ಮಸಂದ್ರ ಗ್ರಾಮ ಪಂಚಾಯಿತಿಯಿಂದ ಪಟ್ಟಣ ಪಂಚಾಯಿತಿಗೆ ಯಾವಾಗ ಸೇರಿತು ಎಂದು ನನಗೆ ಗೊತ್ತಿಲ್ಲ . ದಾವಾಆಸ್ತಿಯ ಉತ್ತರಕ್ಕೆ ಮೊದಲಿಗೆ ಕಂದಾಯ ಇಲಾಖೆಗೆ ಸೇರಿದ ಆಸ್ತಿ ಇತ್ತು ಎಂದರೆ ನನಗೆ ಗೊತ್ತಿಲ್ಲ . ಆದು ಹಲವಾರು ಜನರಿಗೆ ಬದಲಾಗಿ ಈಗ ಪಟ್ಟಣ ಪಂಚಾಯಿತಿಗೆ ಸೇರಿದೆ ಎಂದರೆ ನನಗೆ ಗೊತ್ತಿಲ್ಲ.

*ದಿ.**29.06.2011** ರ ಕ್ರಯಪತ್ರದ ಆಧಾರದ ಮೇಲೆ ದಾವಾಆಸ್ತಿಯ ಎಲ್ಲಾ ದಾಖಲಾತಿಗಳು ಅವರ ಹೆಸರಿಗೆ ಬರುತ್ತಿವೆ ಎಂದರೆ ಸರಿಯಲ್ಲ. ನಾನು **7** ನೇ ತರಗತಿಯವರೆಗೆ ವಿದ್ಯಾಭ್ಯಾಸ ಮಾಡಿದ್ದೇನೆ. ನನಗೆ ಕನ್ನಡ ಭಾಷೆಯನ್ನು ಓದಲು ಬರುವುದಿಲ್ಲ. ನನ್ನ ವಕೀಲರ ಬಳಿ ತಿಳಿದುಕೊಂಡು ಸದರಿ ಕ್ರಯಪತ್ರ ಮತ್ತು ದಾಖಲಾತಿ ವಾದಿಯ ಹೆಸರಿಗೆ ಇಲ್ಲ ಎಂದು ಹೇಳುತ್ತಿದ್ದೇನೆ. ವಾದಿಯವರ ದಾಖಲಾತಿಗಳು ಸರಿ ಇರುವುದಿಲ್ಲ ಎಂದು ನಾನು ಪ್ರಶ್ನೆ ಮಾಡಿದ್ದೇನೆ. ಸಾಕ್ಷಿ ಮುಂದುವರೆದು ನಾನು ಯಾವುದೇ ದಾಖಲಾತಿಯನ್ನು ಪ್ರಶ್ನೆ ಮಾಡಿರುವುದಿಲ್ಲ ಎಂದು ಹೇಳುತ್ತಾರೆ. ವಾದಿಯವರ ಕ್ರಮಸಂಖ್ಯೆ **15** ಎಂದರೆ ಸರಿಯಲ್ಲ. ಅದೇ ರೀತಿ ಸೈಟು ನಂಬರ್ ಸಹ **15** ಎಂದರೆ ಸರಿಯಲ್ಲ. ನಮಗೆ ಇರುವ ನಿವೇಶನದ ಸಂಖ್ಯೆ **2.** ಸೈಟು ನಂ.**2** ಮತ್ತು ಸೈಟ್ ನಂ.**15** ಕ್ಕೂ ಸಂಬಂಧವಿಲ್ಲ ಎಂದರೆ ಸರಿ.*

*( ಈ ಹಂತದಲ್ಲಿ ಮುಂದುವರೆದ ಪಾಟೀ ಸವಾಲಿಗೆ ಕಾಲಾವಕಾಶ ಕೋರಿದ್ದು ನೀಡಲಾಯಿತು.)*

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನಕ್ಕೆ ಗಣಕೀಕರಿಸಲಾಯಿತು).

ಓದಿ ಹೇಳಿ ಕೇಳಿ ಸರಿಯಾಗಿದೆ.

(ಮನು ಬಿ.ಕೆ.)
ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು
ಜೆಎಂಎಫ್‌ಸಿ, ಶ್ರೀನಿವಾಸಪುರ